ಜನ ತಾವೂ ಒಂದುದಿನ ಹೀಗೇ ಸಾಯಬಹುದು ಎಂಬುದನ್ನು ಮರೆತು, ತಮ್ಮ ಊರಿನ, ತಮ್ಮ ಓಣಿಯ ಸ್ಮಶಾನದಲ್ಲಿ ಕೋವಿಡ್‌ನಿಂದ ಸತ್ತವರ ಅಂತ್ಯಕ್ರಿಯೆಗೆ ಅವಕಾಶವನ್ನೇ ಕೊಡಲಿಲ್ಲ. ಸತ್ತವರು ಮನೆ ಪಕ್ಕದವರಾದರೂ ಅವರ ನಿಲುವು ಬದಲಾಗಲಿಲ್ಲ. ಸಾವು, ಮನುಷ್ಯತ್ವವನ್ನೂ ಕೊಂದು ಹಾಕಿದ್ದನ್ನು ಅಂತಹ ಪ್ರತಿಭಟನೆ ನಡೆಯುತ್ತಿದ್ದ ಜಾಗಗಳಲ್ಲಿ ಹಾಜರಿರುತ್ತಿದ್ದ ತಾಹು ಟಿಪ್ಪಣಿಯಲ್ಲಿ ದಾಖಲು ಮಾಡಿಕೊಂಡಿದ್ದ.

ಔಪಚಾರಿಕವಾದ ಸರ್ಕಾರಿ ರಿವಾಜುಗಳನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸಲು ಡಾ. ರಿಯೂ ಅವರ ತಂಡ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಆ ನಿಯಮ ಕೆಲವು ಕಡೆ ಕೆಲವು ರೀತಿಯಲ್ಲಿ ಜಾರಿಗೆ ಬಂತು. ಕಾಲವಿಳಂಬ ಮಾಡುವ ಧಾರ್ಮಿಕ ವಿಧಿವಿಧಾನಗಳಿಗೆ ವಿದಾಯ ಹೇಳಲಾಗಿತ್ತು (ಮಾರ್ಗಸೂಚಿಯಲ್ಲಿ ಈ ಕುರಿತು ಸ್ಪಷ್ಟವಾಗಿ ಏನನ್ನೂ ಹೇಳದಿದ್ದರೂ ಅಲ್ಲಿ ವಿಧಿಸಲಾಗಿದ್ದ ನಿಯಮಗಳು ಹೆಚ್ಚಿನ ಧಾರ್ಮಿಕ ಕಲಾಪಕ್ಕೆ ಆಸ್ಪದ ನೀಡುತ್ತಿರಲಿಲ್ಲ). ಕೋವಿಡ್‌ಪೀಡಿತ ವ್ಯಕ್ತಿಗಳ ಮೃತದೇಹಗಳನ್ನು ಹೂಳುವುದಕ್ಕಿಂತ ಸುಡುವುದೇ ಲೇಸು ಎಂದು ಸರ್ಕಾರ ನಿರ್ಧರಿಸಿತು. ಇಂತಹ ಶವಗಳ ದಹನಕ್ಕಾಗಿಯೇ ಗೊತ್ತುಪಡಿಸಿದ ಚಿತಾಗಾರಗಳ ಮುಂದೆ ಉದ್ದನೆಯ ಕ್ಯೂ ಬೆಳೆಯಿತು. ಹೀಗಾಗಿ ಶವವನ್ನು ಇಟ್ಟುಕೊಂಡು ದಿನಗಟ್ಟಲೆ ಕಾಯುವುದು ಅನಿವಾರ್ಯವಾಯಿತು.

ಪಡಿತರ ವಸ್ತುಗಳಿಗಾಗಿ ಸರದಿಯಲ್ಲಿ ಸಾಲು ನಿಲ್ಲುವುದು, ವ್ಯಾಕ್ಸಿನ್‌ಗಾಗಿ ಅಲೆದಾಡುವುದು, ಸ್ಟೀಮರ್ ಮೂಲಕ ಉಗಿ ತೆಗೆದುಕೊಳ್ಳುವುದು, ಹೊಸ ಹೆಲ್ತ್ ಟಿಪ್ಸ್‌ಗಾಗಿ ಟಿ.ವಿ. ಮುಂದೆ ಕೂರುವುದು ಇಂತಹ ಕೆಲಸಗಳ ಮಧ್ಯೆ ಯಾರು ಸತ್ತರು, ಯಾರು ಉಳಿದರು ಎಂಬ ವಿಷಯವಾಗಿ ಯೋಚಿಸಲು ಜನರಿಗೆ ಪುರುಸೊತ್ತೇ ಆಗಲಿಲ್ಲ.

ಕ್ರಮೇಣ ಹೆಣದಮೇಲೆ ಹೊದಿಸುವ ಬಟ್ಟೆ ಹಾಗೂ ಇತರ ಸಾಮಗ್ರಿಗಳ ಕೊರತೆಯೂ ಎದುರಾಯಿತು. ಅರಣ್ಯ ಇಲಾಖೆ ಕಟ್ಟಿಗೆ ತಂದು ಸುರಿದು, ಸುರಿದು ಹೈರಾಣಾಯಿತು. ಸಂಸ್ಕಾರಕ್ಕೆ ದಿನಗಟ್ಟಲೆ ಕಾದರೂ ಸಾಲು ಕರಗುತ್ತಲೇ ಇರಲಿಲ್ಲ. ಅಂಗಳದಲ್ಲಿ ಮಲಗಿಸಿದ ಹೆಣ ತಂಗಳಾಯಿತು. ಇನ್ನು ಈ ಸಾಲು ಕರಗದು ಎಂದರಿತ ಸರ್ಕಾರ, ನಗರದ ಮೂರು ಕಡೆಗಳಲ್ಲಿ ಹೊಸದಾಗಿ ಸ್ಮಶಾನಗಳನ್ನು ನಿರ್ಮಿಸಿತು. ಒಂದೊಂದು ಕಡೆಯೂ ಏಕಕಾಲದಲ್ಲಿ 20 ಶವಗಳನ್ನು ದಹಿಸುವ ಸೌಲಭ್ಯ ಒದಗಿಬಂತು. ಇದರಿಂದ ಸತ್ತವರ ಸಂಬಂಧಿಗಳು ಸಮಾಧಾನದ ನಿಟ್ಟುಸಿರು ಬಿಡುವಂತಾಯಿತು.

‘ಇಲ್ಲಿ ಏನೇ ಅವ್ಯವಸ್ಥೆ ಆಗಿರಲಿ, ಶವಸಂಸ್ಕಾರದ ವಿಷಯದಲ್ಲಿ ನಾವು ಪ್ಲೇಗ್‌ಪೀಡಿತ ಓರಾನ್ ಪಟ್ಟಣಕ್ಕಿಂತ ಎಷ್ಟೋ ವಾಸಿ ಎಂದೇ ಹೇಳಬೇಕು. ಏಕೆಂದರೆ, ಅಲ್ಲಿ ಆಳವಾಗಿ ತೋಡಿದ್ದ ಗುಂಡಿಯಲ್ಲಿ ಹೆಣ್ಣು–ಗಂಡೆನ್ನದೆ ಮೃತದೇಹಗಳನ್ನು ಗುಂಪು ಗುಂಪಾಗಿ ಎಸೆದು, ಮೇಲೆ ಸುಣ್ಣದ ನೀರನ್ನೂ ಸುರಿದು ಮಣ್ಣು ಮಾಡಲಾಗುತ್ತಿತ್ತಂತೆ. ಅದರ ಮೇಲೆ ಮತ್ತೊಂದು ಒಬ್ಬೆ ಹೆಣಗಳು, ಮತ್ತೆ ಸುಣ್ಣದ ನೀರು, ಮಣ್ಣು... ಹೀಗೇ ಪುನರಾವರ್ತನೆ ಆಗುತ್ತಿತ್ತಂತೆ’ ಎಂದು ಡಾ. ರಿಯೂ ಬರೆದಿಟ್ಟಿದ್ದ ಟಿಪ್ಪಣಿಯನ್ನು ತಾಹು ನೋಡಿದ. ಗಂಗಾನದಿಯಲ್ಲಿ ತೇಲಿ ಹೋಗುತ್ತಿದ್ದ ಕೊಳೆತ ಶವಗಳ ವಿಡಿಯೊವನ್ನು ಕಣ್ಣಮುಂದೆ ಹಿಡಿದ.

ನಮ್ಮ ಸಹಜೀವಿಗಳು, ಅದರಲ್ಲೂ ಈ ಪಿಡುಗಿನಿಂದ ಬಹಳ ದೊಡ್ಡ ನಷ್ಟಗಳನ್ನು ಅನುಭವಿಸಿದವರು, ಕಾಲ ಕಳೆದಂತೆ ಪ್ರಿಯ ಬಂಧುಮಿತ್ರರ ಅಗಲಿಕೆಗೆ ಹೊಂದಿಕೊಂಡು ಬಿಟ್ಟರೇನು? ಹಾಗೆ ಹೇಳುವುದು ಸಂಪೂರ್ಣವಾಗಿ ಸರಿ ಅನಿಸುವುದಿಲ್ಲ. ಬದಲಾಗಿ ಅವರು ಭೌತಿಕವಾಗಿ ಮತ್ತು ಭಾವನಾತ್ಮಕವಾಗಿ ಒಂದು ಬಗೆಯ ಅಭಾವವನ್ನು, ಮರೆವನ್ನು ಅನುಭವಿಸಿದರೆಂದು ಹೇಳುವುದು ಹೆಚ್ಚು ಸರಿ.

ತಾಹುನ ಪ್ರಕಾರ, ‘ಅನ್ಯರಿಗೆ ತೊಂದರೆ ಕೊಡ್ತಾ ಬದುಕೋದೇ ಕೋವಿಡ್‌ನಂತಹ ಸಾಂಕ್ರಾಮಿಕದ ಲಕ್ಷಣ’. ಆತ ವಿವರಿಸುವಂತೆ ಸಮಾಜದಲ್ಲಿ ಮೂರು ಮಾದರಿಯ ಜನರಿದ್ದಾರೆ. ಮೊದಲನೆಯ ಗುಂಪಿನವರು, ತಮ್ಮ ನಂಬಿಕೆ ಮತ್ತು ವರ್ತನೆಗಳು ಸ್ವತಃ ರೋಗವೆಂದೇ ಅರಿಯದವರು. ಆ ರೋಗಗಳನ್ನೇ ಸಂತೋಷದಿಂದ ಅನುಭವಿಸುವವರು. ಅವನ್ನು ಮತ್ತೊಬ್ಬರಿಗೆ ಹರಡುತ್ತ ಜೀವಿಸುವವರು. ಇನ್ನು ಎರಡನೇ ಗುಂಪಿನವರು, ಯಾವುದು ರೋಗವೆಂದು ಗೊತ್ತಿರುವವರು. ಆದರೆ ಪ್ರತಿರೋಧಿಸಲು ಆಗದವರು. ಕೊನೆಯದಾಗಿ ಮೂರನೇ ಗುಂಪಿನವರು, ಯಾವುದು ರೋಗವೆಂದು ಸ್ಪಷ್ಟ ಗೊತ್ತಿರುವವರು; ಅವುಗಳಿಂದ ಬಿಡುಗಡೆಗೊಳ್ಳಲು ಕೂಡ ಸೆಣಸುವವರು. ಈ ಲೋಕದಲ್ಲಿ ಪಿಡುಗುಗಳೂ ಇವೆ, ಬಲಿಪಶುಗಳೂ ಇದ್ದಾರೆ. ನಾನು ಬಲಿಪಶುಗಳ ಜತೆಗೆ ಇರುವುದನ್ನು ಆಯ್ಕೆ ಮಾಡಿಕೊಂಡೆ ಎನ್ನುತ್ತಾನೆ ತಾಹು. ಆತನ ಈ ವ್ಯಕ್ತಿತ್ವವು ಡಾ. ರಿಯೂ ಅವರನ್ನು ಬಹುವಾಗಿ ಸೆಳೆದಿದೆ.

ಕೋವಿಡ್ ಕಾಲದ ಪ್ರೀತಿ, ಪ್ರೇಮ, ಪ್ರಣಯ, ವಿರಹದ ಬಗೆಗೆ, ಹಿರಿಯ ಜೀವಗಳು ಅನುಭವಿಸಿದ ಪುತ್ರ/ಪುತ್ರಿಶೋಕದ ಬಗೆಗೆ, ಅಪ್ಪ–ಅಮ್ಮನನ್ನು ಕಳಕೊಂಡ ‘ಕೋವಿಡ್ ಆರ್ಫನ್’ಗಳೆಂಬ ಮುಗ್ಧ ಪುಟ್ಟ ಜೀವಗಳ ಬಗೆಗೆ ವಿವರಣೆ ನೀಡುತ್ತಾ ನಿಮ್ಮ ಕರುಳನ್ನು ಕಿವುಚುವ ಕೆಲಸಕ್ಕೆ ಕೈಹಾಕುವುದಿಲ್ಲ. ಈ ಲೋಕದಲ್ಲಿ ಪ್ರತಿಯೊಬ್ಬರೂ ದಣಿದವರಂತೆ ಕಾಣುತ್ತಾರೆ. ಯಾಕೆಂದರೆ ಎಲ್ಲರನ್ನೂ ಸಾಂಕ್ರಾಮಿಕ ಆವರಿಸಿಕೊಂಡಿದೆ. ಆದ್ದರಿಂದಲೇ ನಮ್ಮಲ್ಲಿ ಕೆಲವರು, ಈ ಕೋವಿಡ್ ನಮ್ಮಿಂದ ಆಚೆ ಇರಬೇಕೆಂದು ಯಾವಾಗಲೂ ಪ್ರಯತ್ನಿಸುವರು, ಅಪಾರವಾದ ಹತಾಶೆ ಹುಟ್ಟಿಸುವ ದಣಿವನ್ನು ಅನುಭವಿಸುತ್ತಾರೆ. ಸಾವನ್ನು ಹೊರತುಪಡಿಸಿ ಬೇರೆ ಯಾವುದೂ ಈ ದಣಿವಿನಿಂದ ಬಿಡುಗಡೆ ನೀಡುವುದಿಲ್ಲ.

ಈ ಕಥಾನಕ ಈಗ ಕೊನೆ ತಲುಪುತ್ತಿದೆ. ಡಾ. ಬರ್ನಾರ್ಡ್ ರಿಯೂ ಅವರು, ತಾನೇ ಇದರ ನಿರೂಪಕನೆಂದು ಹೇಳಿಕೊಳ್ಳುವ ಸಮಯಬಂದಿದೆ. ಕೋವಿಡ್‌ನಿಂದ ಊರು ನಿಧಾನವಾಗಿ ಸ್ವಾತಂತ್ರ್ಯ ಪಡೆಯುತ್ತಿದೆ. ಆ ಸ್ವಾತಂತ್ರ್ಯದ ಮುಖ್ಯ ಲಕ್ಷಣವಾಗಿ ಶಾಲೆಗಳು ತೆರೆದಿವೆ. ಮಕ್ಕಳು ಹೊರಬಿದ್ದಿದ್ದಾರೆ ಎಂದರೆ ಊರಲ್ಲಿ ಸಂಭ್ರಮಮೂಡಿದೆ ಎಂದೇ ಅರ್ಥ. ವ್ಯಾಪಾರ, ವಹಿವಾಟು ಸಹ ಮೊದಲಿನ ವೇಗ ಪಡೆದುಕೊಂಡಿದೆ. ಸಾಂಕ್ರಾಮಿಕ ಸರಿದು ಹೋಗುತ್ತಿದೆ ಎಂದೇನೋ ಊರು ಸಂಭ್ರಮಿಸುತ್ತಿದೆ. ಆದರೆ, ನರಳುವ ರೋಗಿಗಳಲ್ಲಿ ಮಾತ್ರವಲ್ಲ, ಮನುಷ್ಯತ್ವ ಮರೆತ ಸಮಾಜ, ಸಮಾಜದ ಕಾಳಜಿಯನ್ನೇ ಮರೆತ ಸರ್ಕಾರ, ಮಾನವೀಯತೆಯನ್ನು ಮರೆತು ಲಸಿಕೆ ಹಾಕಲು, ಚಿಕಿತ್ಸೆ ನೀಡಲು, ಹೆಣ ಸುಡಲು ಲಂಚ ಕೇಳುವ ನೌಕರವರ್ಗ, ತನ್ನ ಜಾತಿ, ತನ್ನ ಧರ್ಮದ ಜನರಿಗಷ್ಟೇ ನೆರವಿನಹಸ್ತ ಚಾಚುವ ಕುರುಡು ಪ್ರೇಮದ ಧರ್ಮ ಎಲ್ಲಲ್ಲೂ ಕೋವಿಡ್ ಆತುಕೊಂಡಿದ್ದು ನಿಚ್ಚಳವಾಗಿದೆ. ಹಾಗಾದರೆ ನಮ್ಮೂರಿನ ಜನ ಈ ಸುದೀರ್ಘ ಸಾಂಕ್ರಾಮಿಕದ ನರಳಾಟದಿಂದ ಯಾವ ಪಾಠ ಕಲಿತರು?

ಪ್ರತಿಕ್ರಿಯಿಸಿ: feedback@sudha.co.in



ಅಗಲಿದ ಆಪ್ತರ ಅಸ್ಥಿಗಳನ್ನು ಆಯುತ್ತಾ...